ಬ್ಯಾಂಕುಗಳಿಗೆ ಮತ್ತು ಅರ್ಬನ್ ಬ್ಯಾಂಕುಗಳಿಗೆ cost of fundingನಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಅದಕ್ಕಾಗಿ ಅನೇಕ ಅರ್ಬನ್ ಬ್ಯಾಂಕುಗಳವರು ತಮಗೆ ನಷ್ಟವಾಗುತ್ತದೆ ಎನ್ನುವ ಭಾವನೆಯಿಂದ ನೇಕಾರರಿಗೆ ಸಾಲವನ್ನು ಕೊಡಲು ಮುಂದೆ ಬರುತ್ತಿಲ್ಲ. ಸರ್ಕಾರ ನೇಕಾರರಿಗೆ ನಿಗದಿತವಾಗಿರುವ ಬಡ್ಡಿ ರಿಯಾಯಿತಿಯನ್ನು ಕೊಡುವ ಬಗ್ಗೆ ನಿರ್ಣಯವಾಗಿದೆ. ಸನ್ಮಾನ್ಯ ಸಿದ್ದು ಸವದಿಯವರು ಕೇಳಿರುವುದು ನಮಗೆ ಅರ್ಥವಾಗಿದೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಸಮಾಲೋಚನೆ ಮಾಡಿ, ಅದನ್ನು ಜವಳಿ ಇಲಾಖೆ ಮುಖಾಂತರ ಕೊಡಿಸಲು ಕ್ರಮ ತೆಗೆದುಕೊಳ್ಳಲು ಆದಷ್ಟು ಬೇಗನೆ ಸರ್ಕಾರದ ಆದೇಶವನ್ನು ಹೊರಡಿಸಲು ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿದ್ದು ಸವದಿ: ಆಯವ್ಯಯದಲ್ಲಿ ಇಟ್ಟಿದ್ದ 50 ಲಕ್ಷ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಲು ಹೇಳಿ. ಅದನ್ನೂ ಬಿಡುಗಡೆ ಮಾಡಿಲ್ಲ.

ಅಧ್ಯಕ್ಷರು: ಆಯಿತು, ಈಗ ಒಂದು ಪ್ರಕಟಣೆ ಇದೆ.

6. ಪ್ರಕಟಣೆ

ಅಧ್ಯಕ್ಷರು: 13ನೇ ವಿಧಾನಸಭೆಗೆ ಕೊಪ್ಪಳ ವಿಧಾನಸಭಾ ಕ್ಷೇತ್ರ ಸಂಖ್ಯೆ 64ರಿಂದ ಚುನಾಯಿತರಾಗಿದ್ದ ಶ್ರೀ ಕರಡಿ ಸಂಗಣ್ಣ ಅಮರಪ್ಪರವರು ತಮ್ಮ ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಈ ದಿನ, ಅಂದರೆ ದಿನಾಂಕ 03–03–2011ರಂದು ನೀಡಿದ್ದು, ಸದರಿ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ.

* * * *

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 50 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 4ನೇ ಮಾರ್ಚ್ 2011ರ ಶುಕ್ರವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

* * * * *